ಕೆರೆಗಳು ನೀರಿಲ್ಲದೆ ಬತ್ತಿರುವುದು
178 : (126)

ಶ್ರೀ ರುದ್ರೇಶ ಗೌಡ ವೈ.ಎನ್ (ಬೇಲೂರು)

ಅ) ಬೇಲೂರು ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೆರೆಗಳು ನೀರಿಲ್ಲದೆ ಬತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದಾಗಿ, ಗ್ರಾಮೀಣ ಭಾಗದಲ್ಲಿ ದನಕರು, ಪಶುಪಕ್ಷಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದನಕರುಗಳ ಕುಡಿಯುವ ನೀರಿಗಾಗಿ ಕೆರೆಯ ಅಂಗಳದಲ್ಲಿ ಗುಂಡಿ ತೆಗೆಯುವುದು ಸೂಕ್ತವಲ್ಲವೇ. ಹಾಗೂ ಕೆರೆಗಳ ಹೂಳು ತೆಗೆದು ನೀರು ಸಂಗ್ರಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗೋವಿಂದ ಎಂ.ಕಾರಜೋಳ
(ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಾಗೂ ಸಕಾಲದಲ್ಲಿ ಮಳೆಯಾಗದ ಕಾರಣ ಕೆರೆಗಳಿಗೆ ಸರಿಯಾಗಿ ನೀರು ತುಂಬಿದೆ ಬತ್ತಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಂದಿದೆ

ಇ) ಮೇಲೆ ತಿಳಿಸಿರುವಂತೆ ಮಳೆಯ ಅಭಾವದಿಂದಾಗಿ ಕೆರೆಗಳಲ್ಲಿ ನೀರು ತುಂಬಿದೆ ಬತ್ತಿಹೋಗಿರುವ ಕಾರಣ ಕೆರೆಯ ಅಂಗಳದಲ್ಲಿ ಗುಂಡಿಗಳನ್ನು ತೆಗೆದರೂ ಸಹ ಅವುಗಳಲ್ಲಿ ನೀರು ಸಂಗ್ರಹವಾಗುವ ಸಾಧ್ಯತೆಯಿಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.